ಜಿಲ್ಲಾವಾರು ಬೀಡಿ ಕಾರ್ಮಿಕರ ಸಂಖ್ಯೆ

ಕ್ರಮ ಸಂಖ್ಯೆ	ಜಿಲ್ಲೆ		ಕಾರ್ಮಿಕರ ಸಂಖ್ಯೆ
೧	೨		೩
೧	ಬೆಂಗಳೂರು	...	೫,೯೫೦
೨	ತುಮಕೂರು	...	೮,೪೪೪
೩	ಕೋಲಾರ	...	೨,೦೨೦
೪	ಮೈಸೂರು	...	೨,೬೬೨
೫	ಮಂಡ್ಯ	...	೩೦೬
೬	ಚಿಕ್ಕಮಗಳೂರು	..	ಇಲ್ಲ
೭	ಮಡಿಕೇರಿ	...	ಇಲ್ಲ
೮	ಹಾಸನ	...	ಇಲ್ಲ
೯	ದಕ್ಷಿಣ ಕನ್ನಡ	...	೩,೧೬,೯೬೫
೧೦	ಶಿವಮೊಗ್ಗ	..	೫೪೦
೧೧	ಧಾರವಾಡ	...	೭,೪೫೫
೧೨	ಉತ್ತರ ಕನ್ನಡ	...	ಇಲ್ಲ
೧೩	ಚಿತ್ರದುರ್ಗ	...	೨,೦೯೩
೧೪	ಬಳ್ಳಾರಿ	...	೧,೭೬೪
೧೫	ಗುಲ್ಬರ್ಗ	...	೧,೧೪೧
೧೬	ರಾಯಚೂರು	...	೨೮೮
೧೭	ಬೀದರ್	...	ಇಲ್ಲ
೧೮	ಬೆಳಗಾಂ	...	೩,೦೧೬
೧೯	ಬಿಜಾಪುರ	...	೨,೬೦೦
		ಒಟ್ಟು	೩,೫೫,೨೪೪

ನಿರುದ್ಯೋಗ ಸಮಸ್ಯೆ ಬಗೆಹರಿಸುವುದು

೧೬೮೨. ಶ್ರೀ ಆರ್. ವೆಂಕಟರಾವಮಯ್ಯ (ಮುಳಬಾಗಿಲು) ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೯೮೭-೮೮ ಮತ್ತು ೧೯೮೮-೮೯ರಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸರ್ಕಾರವು ರೂಪಿಸಿದ ವಿವಿಧ ಯೋಜನೆಗಳು ?

೨. ನಿರುದ್ಯೋಗ ಸಮಸ್ಯೆ ಬಗೆಹರಿಸಲು ಬೀಡಿ ಮತ್ತಿತರ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸುವ ಸಹಕಾರ ಸಂಘಗಳನ್ನು ಪ್ರಾಯೋಗಿಕವಾಗಿ ಸ್ಥಾಪಿಸಲು ಸರ್ಕಾರ ಪರಿಶೀಲಿಸುತ್ತಿದೆಯೆ ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

೧. ರಾಜ್ಯದಲ್ಲಿ ಹಾಗೂ ಕೈಗಾರಿಕೆಗಳಲ್ಲಿ ಸಮಾನ ಅಭಿವೃದ್ಧಿಗಾಗಿ ಲಭ್ಯವಿರುವ ವಸ್ತು ಮತ್ತು ಮಾನವ ಶಕ್ತಿ ಸಂಪನ್ಮೂಲಗಳನ್ನು ಬಳಸಿಕೊಂಡು ಕೈಗಾರಿಕೆಗಳಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ವಲಯದಲ್ಲಿ ಹಾಗೂ ಸಣ್ಣ ಕೈಗಾರಿಕೆಗಳಲ್ಲಿ ಅನೇಕ ಯೋಜನೆಗಳನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಜಾರಿಗೊಳಿಸುತ್ತಿದೆ. ಕೆಲವು ಜನಿಸುವ ಯೋಜನೆಗಳೆಂದರೆ ಕೈಮಗ್ಗ, ಕರಕುಶಲ ಕೈಗಾರಿಕೆ, ತೆಂಗಿನ ನಾರು, ಖಾದಿ ಮತ್ತು ಗ್ರಾಮೋದ್ಯೋಗ, ಜೇನು ಸಾಕಣೆ, ಚರ್ಮ, ಸಹಾಯಕ ಕೈಗಾರಿಕೆ

ಗಳು, ಕೈಗಾರಿಕಾ ಎಸ್ಟೇಟುಗಳು, ಸ್ವಯಉದ್ಯೋಗ ಕಾರ್ಯಕ್ರಮ, ಟೈಸಂ ಇತ್ಯಾದಿ ಬಹುತೇಕ ಯೋಜನೆಗಳನ್ನು ಜಿಲ್ಲಾ ಪರಿಷತ್ತುಗಳು ಜಾರಿಗೊಳಿಸುತ್ತಿವೆ.

೨. ಹೌದು. ಸಹಕಾರ ವಲಯದಲ್ಲಿ ಕೈಮಗ್ಗ, ಕರಕುಶಲ, ತೆಂಗಿನ ನಾರು, ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಬೀಡಿ ಕೆಲಸಗಾರರಿಗಾಗಿ ಸಹಕಾರ ಸಂಘಗಳನ್ನು ರಚಿಸುವ ವಿಷಯ ವಾಣಿಜ್ಯ ಹಾಗೂ ಕೈಗಾರಿಕಾ ಇಲಾಖೆಯ ತೀವ್ರ ಪರಿಶೀಲನೆಯಲ್ಲಿದೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ ಮಾನ್ಯ ಎಂ.ಪಿ. ಪ್ರಕಾಶ್‌ರವರ ಹೆಸರಿನ ಮುಂದಿರುವ ೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೩೦ನೇ ಕಲಮಿನ ಮೇರೆಗೆ.

ರಾಯಚೂರು ಜಿಲ್ಲೆ ಪೋಲೀಸ್ ಕೇಂದ್ರ ಕಚೇರಿಯ ಬಯಲು ಚಿತ್ರಮಂದಿರದಲ್ಲಿ ಚಿತ್ರ ಪ್ರದರ್ಶಿಸಲು ಅನುಮತಿ ಕೋರಿರುವ ಬಗ್ಗೆ ದಿನಾಂಕ ೨೬-೩-೧೯೮೫ರ ರಂದು ಹೊರಡಿಸಲಾದ ಹೆಚ್.ಡಿ. ೩ ಸಿ.ಎನ್.ಎ. ೮೫ನೇ ಆದೇಶವನ್ನು ಸಭೆಯ ಮುಂದಿಡ ಬಯಸುತ್ತೇನೆ.

ಅಧ್ಯಕ್ಷರು.—ಮುಂದಿಡಲಾಯಿತು.

ವರದಿಯನ್ನೊಪ್ಪಿಸುವುದು

ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಆರನೆಯ ವರದಿ

ಅಧ್ಯಕ್ಷರು.—ಶ್ರೀ ಬಿ. ಆರ್. ಯಾವಗಲ್‌ರವರ ಪರವಾಗಿ ನಾನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಗಮನ ಸೆಳೆಯುವ ಸೂಚನೆ

ಕಂಚಿಗಲ್ ತಾಲ್ಲೂಕಿನ ಅಮೃತೂರಿನಲ್ಲಿ ದಲಿತರ ಮೇಲೆ ದೌರ್ಜನ್ಯ ಮತ್ತು ಸಾಮೂಹಿಕ ಬಹಿಷ್ಕಾರ ಹಾಕಿರುವುದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಸಭಾಧ್ಯಕ್ಷರೇ ಕುಣಿಗಲ್ ತಾಲೂಕಿನ ಅಮೃತೂರಿನಲ್ಲಿ ಇತ್ತೀಚೆಗೆ ದಲಿತರ ಮೇಲೆ ನಡೆದ ದೌರ್ಜನ್ಯದಿಂದ ಅವರಿಗೆ ಮಾನಸಿಕ ಹಿಂಸೆಯಾಗಿರುವುದು, ಅವರ ಆಸ್ತಿಪಾಸ್ತಿಗಳ ನಷ್ಟ ಮತ್ತು ಸಾಮಾಜಿಕ ಬಹಿಷ್ಕಾರವನ್ನು ಹಾಕಿರುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜಿ.ಬಸವಣ್ಣಪ್ಪ (ಸಮಾಜಕಲ್ಯಾಣ ಮಂತ್ರಿಗಳು).—ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ.

ಅಧ್ಯಕ್ಷರೇ.—ಕುಣಿಗಲ್ ತಾಲ್ಲೂಕು ಅಮೃತೂರಿನಲ್ಲಿ ಸುಮಾರು ೬೦೦೦ ಜನಸಂಖ್ಯೆ ಇದ್ದು, ಒಕ್ಕಲಿಗ ಮತ್ತು ದಲಿತರು ಜಾಸ್ತಿ ಸಂಖ್ಯೆಯಲ್ಲಿರುತ್ತಾರೆ. ಅಲ್ಲಿ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಪಟಾಲಮ್ಮ ಎಂಬ ಗ್ರಾಮ ದೇವತೆಯನ್ನು ಮೆರವಣಿಗೆಯಲ್ಲಿ ಕೊಂಡು ಹೋಗುವ ಪದ್ಧತಿ ಇದೆ. ಆದರೆ, ಹರಿಜನರ ಓಣಿಗೆ ಹೋಗಿ ಪೂಜೆ ಪಡೆಯುತ್ತಿದ್ದಿಲ್ಲ. ಅಲ್ಲದೆ, ಹರಿಜನರನ್ನು ಪಟಾಲಮ್ಮ ದೇವಸ್ಥಾನದ ಒಳಗೆ ಸಹ ಬಿಡುತ್ತಿರಲಿಲ್ಲ.

ಈ ದೇವಸ್ಥಾನದ ಮೆರವಣಿಗೆಯನ್ನು ನಡೆಸಲು ಬಲಿಜ ಜನಾಂಗದ ಶಾಮಣ್ಣ ಎಂಬುವರ ನೇತೃತ್ವದಲ್ಲಿ ಒಂದು ಸಮಿತಿ ರಚಿಸಲಾಗಿತ್ತು. ಕಳೆದ ವರ್ಷ ಹರಿಜನರು ತಮ್ಮದೇ ಆದ ಹಿರಿಯಮ್ಮ ಎಂಬ ದೇವತೆಯ ಗುಡಿಯನ್ನು ದುರಸ್ತಿ ಮಾಡಿ ಪಟಾಲಮ್ಮ ದೇವತೆಯ ಮೆರವಣಿಗೆಯು ಹರಿಜನರ